ಸಮುದ್ರ ಮಥನ



## ಇಸ್ರೋದ ಯಶೋಗಾಥೆ

'ಬಾಹ್ಯಾಕಾಶದಲ್ಲಿ ದೈತ್ಯ ಹೆಜ್ಜೆ', ಅಬ್ದುಲ್ ರೆಹಮಾನ್ ಪಾಷ ಅವರ ಮುಖಪುಟ ಲೇಖನ (ಸುಧಾ, ಫೆ.23) ದಲ್ಲಿ ಎಲ್ಲರೂ ಓದಿ ತಿಳಿದು ಕೊಳ್ಳಬೇಕಾದಂಥ ವಿಚಾರಗಳಿವೆ. ಇದು ಇಸ್ರೋದ ಯಶೋಗಾಥೆಯ ಮೆರುಗನ್ನು ವರ್ಣಿಸಿದೆ. ಇಸ್ರೋದ ಮಹತ್ತರ ಸಾಧನೆಯ ವಿವರಗಳನ್ನು ಎಳೆಎಳೆಯಾಗಿ ವಿವರಿಸಲಾಗಿದೆ. ಉಪಗ್ರಹಗಳ ಬಗ್ಗೆ ಅರಿವಿಲ್ಲದವರಿಗೆ ಒಳ್ಳೆಯ ಮಾರ್ಗದರ್ಶನ ನೀಡಿದೆ.

—ಗಾಣಧಾಳು ರಾಮಣ್ಣ ಚಿತ್ರದುರ್ಗ, ಬಿ.ಎನ್. ಸೊಲ್ಲಾಪುರೆ ಕಮಲನಗರ, ಎಚ್.ಆನಂದಕುಮಾರ್ ಚಿತ್ರದುರ್ಗ, ಮುಕುಂದ ಹೆರಕಲ್ಲ ಕಲಬುರಗಿ, ಎಸ್. ಲಕ್ಷ್ಮೀನರಸಿಂಹ ಚಾಮರಾಜನಗರ, ಬಿ.ಎಸ್.ರಮೇಶ್ ಬೆಂಗಳೂರು, ಎ.ಪಿ. ರಂಗನಾಥ್ ಮೈಸೂರು, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಬಿ.ಎಂ. ಶಿವಲಿಂಗೇಗೌಡ ಚೇವಿನಹಳ್ಳಿ, ಕೊಹಿಮ ಬಸರಕೋಡು, ಸು.ವಿಜಯಲಕ್ಷ್ಮಿ ಶಿವಮೊಗ್ಗ

## ಶ್ಲಾಘನೀಯ

ಒಂದೇ ರಾಕೆಟ್‌ನಲ್ಲಿ ಏಕಕಾಲಕ್ಕೆ 104 ಉಪಗ್ರಹಗಳನ್ನು ಕಕ್ಷೆಗೆ ಸೇರಿಸಿದ ಇಸ್ರೋ ವಿಶ್ವ ವಿಕ್ರಮ ಶ್ಲಾಘನೀಯ. ನಮ್ಮ ವಿಜ್ಞಾನಿಗಳ ಬಗ್ಗೆ ಎಲ್ಲರೂ ಹೆಮ್ಮೆಪಡುವಂತಾಗಿದೆ. ಮಾಹಿತಿಪೂರ್ಣ ಬರಹ.

—ರತ್ನಾಕರ ಹೆಗಡೆಕಟ್ಟೆ ಮೂಡುಬಿದರೆ

## ಚಿಂತನೆ ಒರೆಗೆ

'ವಿಚಾರ ಲಹರಿ'ಯಲ್ಲಿ 'ಎಲ್ಲಾ ಕೊಂಡುಕೊಳ್ಳಬಹುದು' (ತೋಷ) ಬರಹ ಚಿಂತನೆ ಒರೆಗೆ ಹಚ್ಚುವಂತಿದೆ. ದುಡ್ಡಿಗೇನು ಮಾಡುವುದು ಎಂಬುದು ಒಂದು ವರ್ಗವಾದರೆ 'ದುಡ್ಡನ್ನೇನು ಮಾಡುವುದು?' ಎಂಬುದು ಇನ್ನೊಂದು ವರ್ಗ. ಎರಡು ಮನಸ್ಸುಗಳ ವೈರುಧ್ಯಗಳನ್ನು ತೋಷ ಮನಮುಟ್ಟುವಂತೆ ಚಿತ್ರಿಸಿದ್ದಾರೆ.

—ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ

## ಎಲ್ಲೆಡೆಯೂ ಸಲ್ಲುವವರು

'ನಿಮ್ಮೊಡನೆ'ಯಲ್ಲಿ 'ಅಮೆರಿಕದ ಉದ್ಯೋಗ; ಕಠಿಣ ಸವಾಲು' (ಬಿ.ಎಂ. ಹನೀಫ್) ಬರಹದಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಮೆರಿಕದ ಪ್ರಜೆಗಳಿಗೆ ನೀಡಿದ ಭರವಸೆಯಂತೆ ಆಡಳಿತ ನಡೆಸುತ್ತಿದ್ದಾರೆ ಎಂಬ ವಿಶ್ಲೇಷಣೆ ಇದೆ. ಅಲ್ಲಿಯ ಕಠಿಣ ಸವಾಲುಗಳನ್ನು ಎಲ್ಲೆಡೆಯೂ ಸಲ್ಲುವ ಭಾರತೀಯರು ಸಹನೆಯಿಂದ ಎದುರಿಸಬಲ್ಲರು!

—ರಾಜಶೇಖರ ಹಾದಿಮನಿ ಧಾರವಾಡ

## ಪ್ರವಾಸ ಲೇಖನ

'ಮನತಣಿಸುವ ಸಿಲ್‌ಸಿಲಾ' ಲೇಖನ (ಯೋಗೀಂದ್ರ ಮರವಂತೆ) ಮಾಹಿತಿಪೂರ್ಣವಾಗಿದೆ. ಟುಲಿಪ್ ಹೂತೋಟದ ಚಿತ್ರ ಮನಮೋಹಕವಾಗಿದೆ.

—ಸುಂದರ್ ಬೆಂಗಳೂರು, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

## ಕಥೆ ಚೆನ್ನಾಗಿದೆ

'ಸಾವಕ್ಕನ ಮಗ' ಕಥೆ (ಅನುರಾಧ ಕಟ್ಟಿ) ಚೆನ್ನಾಗಿದೆ. ವಿಭಿನ್ನ ಅನುಭವ ನೀಡಿತು.

—ಎಸ್.ವಿಜಯಕುಮಾರಿ ಬೆಂಗಳೂರು

## ದಾಂಪತ್ಯ ಅಂಕಣ

ದಿನ ನಿತ್ಯದ ವ್ಯವಹಾರದಲ್ಲಿ, ನಾವು ಅನುಭವಿಸುವ ಭಾವನಾತ್ಮಕ ತಾಪತ್ರಯಗಳಿಗೆ ಮೂಲ ನಮ್ಮ ಬಾಲ್ಯ. ಮಾತು ಬರುವ ಮೊದಲೇ, ನಮ್ಮ ವ್ಯಕ್ತಿತ್ವ ಭಾವನಾ ಪ್ರಪಂಚದಿಂದ ರೂಪುಗೊಳ್ಳುತ್ತದೆ. ಇಂದಿನ ನಗರದ ಒತ್ತಡದ ಜೀವನ, ಚಿಕ್ಕ ಕುಟುಂಬ, ಪರಸ್ಪರರ ಸಂಬಂಧಗಳು, ಮುಖ್ಯವಾಗಿ ದಂಪತಿಗಳ ಸಂಬಂಧ ಸಂಕೀರ್ಣವಾಗುತ್ತಿದೆ. ಪ್ರೇಮಿಗಳಿಗೆ, ನವ ಹಾಗೂ ವಯಸ್ಸಾದ ದಂಪತಿಗಳಿಗೂ ಕೂಡ ಮಾರ್ಗದರ್ಶನ ಅನಿವಾರ್ಯವಾಗುತ್ತಿದೆ. ಈ ದಿಶೆಯಲ್ಲಿ, 'ಸುಧಾ'ದಲ್ಲಿ ಪ್ರಕಟವಾಗುವ 'ಸುಖೀ ದಾಂಪತ್ಯ' ಅಂಕಣ (ಡಾ.ವಿನೋದ್ ಛೆಬ್ಬಿ) ಉದಾಹರಣೆ ಸಹಿತ ತಿಳುವಳಿಕೆ ನೀಡುತ್ತಿದೆ.

—ಪ್ರಕಾಶ ಎನ್. ಮಂಗಳೂರು

## ಆದರ್ಶ ಶಾಲೆ

'ಹೀಗೂ ಉಂಟು ಸರ್ಕಾರಿ ಶಾಲೆ!' (ಕೆ. ಪದ್ಮಾಕರ ಭಟ್) ಲೇಖನ ಚೆನ್ನಾಗಿದೆ. ಶಿಕ್ಷಕರ, ಪೋಷಕರ, ಮಕ್ಕಳ ಸಹಕಾರವಿದ್ದರೆ ಸರ್ಕಾರಿ ಶಾಲೆಯನ್ನೂ ಆದರ್ಶ ಶಾಲೆಯನ್ನಾಗಿ ರೂಪಿಸಬಹುದು ಎಂಬುದಕ್ಕೆ ಕಾರ್ಕಳದ ಪೆರ್ವಾಜೆಯ ಸಂಯುಕ್ತ ಪ್ರೌಢಶಾಲೆ ಒಂದು ಉದಾಹರಣೆ.

—ಮೇ.ಗೋ. ಸುಬ್ಬಣ್ಣ ಮೇಗರವಳ್ಳಿ, ನರೇಂದ್ರ ಸಿರಕಜೆ ಮೈಸೂರು, ಲಲಿತಾ ಅಂಬಾಗಿಲು ಉಪ್ಪುಂದ

## ಮನಸೂರೆಗೊಂಡಿತು

ಲ್ಯಾಂಡ್‌ಸ್ಕೇಪ್ ಗಾರ್ಡನಿಂಗ್ (ಗೀತಸದಾ ಮೋಂತಿಮಾರು) ಚಿತ್ರಲೇಖನ ಮನಸೂರೆಗೊಂಡಿತು.

—ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ




